ಅಂದರು. ಮಗನೂ ಬಿಡಲಿಲ್ಲ. 'ಹಾಗಾದರೆ ಅಮ್ಮನನ್ನಾದರೂ ಕಳಿಸಿಕೊಡು' ಅಂದ.

'ಅವಳು ಬಂದರೆ ಕರೆದುಕೊಂಡು ಹೋಗು' ಹೆಂಡತಿ ತನ್ನ ಮಾತು ಮೀರುವುದಿಲ್ಲ ಎಂಬ ಖಾತ್ರಿಯಲ್ಲಿ ದೇಸಾಯರು ಹೇಳಿದರು.

*****

ಆದರೆ ಹೆಂಡತಿ ತನ್ನ ಜತೆ ಸಹಮತ ಹೊಂದಿಲ್ಲ ಎಂದು ಅರಿವಾದೊಡನೆ ದೇಸಾಯರು ವಿಚಲಿತರಾದರು. 'ಜೀವನ ಪೂರ್ತಿ ಒಂದೇ ರೀತಿ ಹಮ್ಮು ಬಿಮ್ಮು ನಿಮ್ಮದು. ಇನ್ನಾದರೂ ನೀವು ಸುಧಾರಿಸಬೇಕು' ಎಂದು ಹೆಂಡತಿ ಅನ್ನುತ್ತಿದ್ದಾಳಲ್ಲ ಎಂಬ ಅಸಹನೆ ಬೇರೆ. ಮಗ ಬೆಂಬಲಕ್ಕೆ ಇದಾನೆ ಎಂಬ ಧೈರ್ಯದಲ್ಲಿ ಗಂಡನಿಗೇ ಉಪದೇಶ ಕೊಡುವಷ್ಟರ ಮಟ್ಟಿಗೆ ಮುಂದುವರಿದು ಬಿಟ್ಟಳೇ!

'ಬದಲಾದ ಕಾಲಕ್ಕೆ ನೀವು ಹೊಂದಿಕೋಬೇಕು' ಹೆಂಡತಿಯ ಮಾತು ಮುಂದುವರಿಯಿತು. 'ಅಲ್ಲಿ ವಿನತಾಗೆ ಹುಷಾರಿಲ್ಲ ಅಂತ ಅವನು ಕರೆಯಲು ಬಂದಿದಾನೆ... ಈಗಲೂ ನೀವು ಮೊಂಡಾಟ ಮಾಡಿದರೆ ಹೇಗೆ? ಇಲ್ಲಿ ನೋಡಿ ಅವಳು ಯಾವ ಜಾತಿಯವಳೇ ಆಗಿರಲಿ, ಅವಳೀಗ ನಮ್ಮ ಸೊಸೆ. ಅವಳು ನಮ್ಮವಳು ಅಂತ ಅಂದುಕೊಂಡ್ರೆ ಸಾಕು. ಆಗ ಜಾತಿ, ಅಂತಸ್ತು, ಪ್ರತಿಷ್ಠೆ ಎಲ್ಲ ಗೌಣವಾಗಿ ಬಿಡುತ್ತೆ ಮತ್ತೆ ಗಿರಿ ಹೇಳೋದು ಕೇಳಿದ್ರೆ ವಿನತಾ ಚೆನ್ನಾಗೇ ಇದಾಳೆ ಅನಿಸುತ್ತೆ. ನೀವೀಗ ಅವಳ ಮೇಲೆ ಪ್ರೀತಿ ತೋರಿಸಿದರೆ ತಾನೇ ಅವಳಿಗೂ ನಮ್ಮ ಮೇಲೆ ಅಭಿಮಾನ ಹುಟ್ಟಲು ಸಾಧ್ಯ! ನಾನಂತೂ ಅವಳ ಜೊತೆ ಹೋಗೋಳು...'

'ಒಬ್ಬಳೇ ಹೋಗಿ ಏನು ಮಾಡ್ತಿ?'

'ಒಬ್ಬಳೇ ಯಾಕೆ ಜತೆಗೆ ಮಗ ಸೊಸೆ ಇರ್ತಾರಲ್ಲ!'

'ನೀನು ಹೋದ್ರೆ ಇಲ್ಲಿ ನನ್ನ ಗತಿ ಏನು?'

'ನೀವೂ ಬಂದು ಬಿಡಿ. ಬಿಗುಮಾನ ಆರೋಗ್ಯಕ್ಕೆ ಒಳ್ಳೆಯದಲ್ಲ.'

'ನಾನು ಬಂದು ಅಲ್ಲಿ ಏನು ಮಾಡಲಿ?'

'ನಿಧಿ ಜೊತೆ ಆಟ ಆಡಿ...'

'ಯಾಕೋ ಮನಸ್ಸು ಒಪ್ಪುತ್ತಾ ಇಲ್ಲ ...' ದೇಸಾಯರು ಮುಖ ತಿರುಗಿಸಿದರು.

'ನಿಮ್ಮ ಕರ್ಮ...' ತಮ್ಮ ಮಾತಿಗೆ ಹೆಂಡತಿ ಹೀಗೆ ಅವಲೊತ್ತುಕೊಂಡಾಳು ಎಂದು ಊಹಿಸಲಾಗದುದರಿಂದ ದೇಸಾಯರು ಅವಾಕ್ಕಾದರು. 'ಅವಳ ಮಾತು ಮುಂದುವರಿಯಿತು.'ಈಗಾಗಲೇ ಊರಲ್ಲಿ, ಯಾಕೆ ಮಗನ ಹತ್ರ ಹೋಗಲ್ಲವೇ? ಅವನು ಇಲ್ಲಿಗೆ ಬರಲ್ಲವೇ? ಮದುವೆ ಆದೊಡನೆ ಮನಸ್ತಾಪ ಶುರೂನಾ... ಸೊಸೆ ಬಹಳ ಬಿಗಿ ಕಾಣುತ್ತೆ...' ಎಂದೆಲ್ಲ ಜನ ಕೊಂಕು ಮಾತಾಡೋಕೆ ಶುರು ಮಾಡಿಬಿಟ್ಟಿದ್ದಾರೆ. ನಂಗಂತೂ ಕೇಳಿ ಕೇಳಿ ಸಾಕಾಗಿ ಹೋಗಿದೆ.'

'ಜನ ತಾನೇ, ಈ ಊರಿನ ಜನರಿಗೆ ಕೆಲಸಾನೂ ಇಲ್ಲ. ಪುಸರೊತ್ತೂ ಇಲ್ಲ...'

'ಅವರು ಹೇಳೋದೂ ಸರೀನೇ' ಹೆಂಡತಿ ಹೇಳಿದಳು– 'ನಮಗೂ ವಯಸ್ಸಾಯಿತಲ್ಲ, ಇಲ್ಲ ಒಂದು ವೇಳೆ ನಮಗೇನಾದ್ರೂ ಆದರೆ ಯಾರನ್ನು ಅಂಗಲಾಚೋದು?'

ದೇಸಾಯರು ಒಪ್ಪಿಕೊಂಡಂತೆ ತಲೆದೂಗಿದರು. ಅವರೇ ನಮಗನಿಸಿದ ಹಾಗೆ ಈಗೆರಡು ಮೂರು ವರ್ಷಗಳಿಂದ ವಾರಿಗೆಯವರೆಲ್ಲ ಒಬ್ಬೊಬ್ಬರಾಗಿ ಕೈಲಾಸಕ್ಕೋ, ವೈಕುಂಠಕ್ಕೋ ಪ್ರಯಾಣ ಬೆಳಸ್ತಾನೇ ಇದಾರೆ. ನೀನಿನ್ನೂ ಗಟ್ಟಿಯಾಗಿದೀಯ. ಅಂದವರ ಮಾತಿನಲ್ಲಿ ಇದ್ದ ಅಸೂಯೆಯನ್ನೂ ಗುರುತಿಸಿ ಆಗಿದೆ. ಯಾರು ಏನೇ ಹೇಳಲಿ, ನಿಧಾನವಾಗಿ ತಮ್ಮ ಆರೋಗ್ಯವೂ

